ಸಾರು ಮಾಡುವ ಮುನ್ನ... ಮಗನನ್ನು ಎಬ್ಬಿಸಿ ರಮಿಸಿ ಏನನ್ನಾದರೂ ಸ್ವಲ್ಪ ತಿನ್ನಿಸೋಣ ಎಂದು ಆಕೆ ಮಲಗುವ ಕೋಣೆಗೆ ಬಂದ್ರೆ... ಮಗು ಆಗಲೇ ಮಲಗಿಯೇ ಬಿಟ್ಟಿತ್ತು. 'ರಾಜಾ ಏಳಪ್ಪ...' ಎಂದು ಮಗುವಿನ ಬೆನ್ನು ಸವರುತ್ತಾಳೆ–ಮಗುವಿಗೆ ಸಣ್ಣದಾಗಿ ಜ್ವರ ಬರುತ್ತಿದೆ !! ಕೌಶಿಕನಿಗೆ ಜ್ವರ ಬಂದ್ರೆ... ಸಾಕು ಆತನ ತಲೆ ಆಗ ತಾನೆ ಕುದಿಸಿ ತೆಗೆದ ಕೋಳಿಮೊಟ್ಟೆಯಂತೆ ಸುಡುತ್ತಿರುತ್ತದೆ ಎಂದು ಬಲ್ಲ ಆಕೆ, ಮಗುವಿನ ತಲೆ ಮುಟ್ಟಿ ನೋಡ್ತಾಳೆ–ಜ್ವರ ಮಗುವಿನ ತಲೆಗೇರಿದೆ ! ಅಯ್ಯೋ... ಮಗುವಿಗೆ ರಾತ್ರಿಯೇ ಜ್ವರವಿತ್ತೆನೋ?! ನಮ್ಮಿಬ್ಬರ ವಾದ–ವಿವಾದದಲ್ಲಿ ಮಗುವಿನ ಜ್ವರವನ್ನೂ ತಾನು ಗಮನಿಸಲಿಲ್ಲವಲ್ಲಾ ಎಂದು ಕುಮುದ ಇನ್ನಿಲ್ಲದಂತೆ ಪರಿತಾಪ ಪಡುತ್ತಾ, ಗಂಡನಿಗೆ ಒಂದು ಮಾತು ತಿಳಿಸೋಣವೆಂದು ಆತನಿಗೆ ತಕ್ಷಣ ಫೋನ್ ಮಾಡಿದ್ದಳು. ಆತ ಇನಿತೂ ಆತಂಕ ಪಡದೆ 'ಏನಿಲ್ಲ... ಅವನ್ದು ಅದು ಮಗ್ಗಿಯ ನಾಟಕ; ಇದೆಲ್ಲ ನಾನು ಕಾಣದ್ದಾ...' ಎಂದು ಹೇಳಿದವನೇ, 'ಮನೆಯಲ್ಲಿರೋ ಜ್ವರದ ಮಾತ್ರೆಯನ್ನರ್ಧ ನುಂಗಿಸು, ರಾತ್ರಿ ನೋಡೋಣ ಅವನ ಕತೆ ಏನೂಂತ' ಎಂದಂದು ಫೋನಿಟ್ಟಿದ್ದ.

ಗಂಡನ ಮಾತಿನಿಂದ ತೀರಾ ಅಸಹನೆಗೊಂಡ ಕುಮುದ, ಮಗುವಿಗೆ ಏನಾಗುತ್ತೇನೋ ಎಂಬ ಭಯದಿಂದ ಊರಲ್ಲಿದ್ದ ತನ್ನ ತಂದೆ ರಾಮಯ್ಯ ಆಳ್ವರಿಗೆ ಫೋನ್ ಮುಖಾಂತರ ವಿಷಯ ತಿಳಿಸಿದ್ದಳು. ಮಗು ಶಾಲೆಗೆ ಸೇರಿದಂದಿನಿಂದ ಗಣಿತ ಮತ್ತು ಮಗ್ಗಿಯಿಂದ ಅದಕ್ಕಾಗುತ್ತಿರುವ ಹಿಂಸೆ, ಈಗಿರುವ ಶಾಲೆಯಲ್ಲೇ ಮಗು ಪಡುತ್ತಿರುವ ಕಷ್ಟ, ಆ ಮಗು ಮುಂದೆ ತನ್ನ ಐಸಿಎಸ್ಸಿ ಸಿಲಬಸ್‌ನಿಂದ ಎದುರಿಸಬಹುದಾದ ಮತ್ತು ಎದುರಿಸಬೇಕಾದ ಪಾಡನ್ನು ತಂದೆಗೆ ಅಳುತ್ತಳುತ್ತಲೇ ವಿವರಿಸುತ್ತ, 'ತಕ್ಷಣ ಬಂದು ನಮ್ಮನ್ನು ಕರ್ಕೊಂಡು ಹೋಗಿ ಪಪ್ಪ...' ಎಂದು ಬೇಡಿಕೊಂಡಿದ್ದಳು.

ಕಾಡುಗಮಿಯ ಮೇಲಚ್ಚಿಲು ರಾಮಯ್ಯ ಆಳ್ವರದ್ದೇನು ವಿದ್ಯೆ – ಬುದ್ಧಿ ಇಲ್ಲದ ಅನ್ಪಡ್ ವ್ಯಕ್ತಿತ್ವವಲ್ಲ. ಊರಿನ ಕೋಟೆ ಶಾಲೆಯ ಹೆಡ್‌ಮಾಸ್ಟರ್ ಅವರು. ಅವರು ಮನೆಮಕ್ಕಳ ಮನಸ್ಥಿತಿಯನ್ನೂ ಬಲ್ಲವರು–ಶಾಲೆ ಮಕ್ಕಳ ನೋವನ್ನೂ ತಿಳಿದವರು. ಆದರೆ ಇದು... ಮಗಳ ಸಂಸಾರದೊಳಗೆ ಸಮಸ್ಯೆಯಾಗಿ ಎದ್ದು ಕೂತಿರುವ ಸೂಕ್ಷ್ಮಾತಿಸೂಕ್ಷ್ಮ ವಿಚಾರ. ಸಂಸಾರದ ಈ ವಿಷಯದೊಳಗೆ ತಾನು ಮೂಗು ತೂರಿಸುವುದು ಎಷ್ಟು ಸರಿ? ತೂರಿಸಿದರೂ... ಎಷ್ಟು ತೂರಿಸಬಹುದು ಎಂದು ಅರೆಕ್ಷಣ ಯೋಚಿಸಿದವರೇ, 'ನಾಳೆ ನಾನು ಬೆಂಗಳೂರಿಗೆ ಬಂದಿಳಿತೇನೆ; ನಿನ್ನ ಗಂಡನಿಗೆ ನಾನು ಬಂದಿಳಿವ ವಿಚಾರ ಗೊತ್ತಾಗುದು ಬೇಡ. ಸೆಕ್ರಟರಿಯಟ್‌ನಲ್ಲಿ ಸ್ವಲ್ಪ ಮ್ಯಾನೇಜ್‌ಮೆಂಟ್ ಕೆಲ್ಸ ಇದ್ದಕ್ಕಿದ್ದಂತೆ ಬಂದುಬಿಟ್ಟಿತು... ಹಾಗೇ ಬಂದು ಬಿಟ್ಟೆ ಮಾರಾಯ' ಅಂತ ಹೇಳ್ತೀನಿ–ಅಂತ ಮಗಳಿಗೆ ಸಾಂತ್ವನ ಹೇಳಿ ಫೋನಿಟ್ಟಿದ್ದರು.

ಅಂದು, ಸಂಜೆ ಬಲಿತು ಮುಸ್ಸಂಜೆಯಾದರೂ ಮಗುವಿನ ಜ್ವರ ಮಾತ್ರ ಇಳಿಯುತ್ತಿಲ್ಲ. ರಾತ್ರಿಯಾಗುತ್ತಲೇ ಮನೆಗೆ ಬಂದವ ಅಕ್ಷಯಕುಮಾರ 'ಹೂ... ಮಗ್ಗಿಯ ಜ್ವರ ಇನ್ನೂ ಬಿಟ್ಟಿಲ್ವಾ... ಇವ್ನಿಗೆ ?' ಎಂದು ಕೈ ಕಾಲು ತೊಳೆಯಲು ಬಚ್ಚಲು ಕೋಣೆಗೆ ತೆರಳಿದ್ದ. ಮುಖ ಒರಸುತ್ತ ಬಂದ ಗಂಡನಿಗೆ ಕಾಫಿ ನೀಡುತ್ತ ಕುಮುದ.

'ಮಗುವನ್ನು ಮೊದ್ಲು ಊರಿಗೆ ಕಳಿಸುವ... ನಾನು ಬೇಕಾದ್ರೆ ಇಲ್ಲೇ ಇರ್ತೀನಿ; ಅವ್ನಿಗೆ ನಿಜಕ್ಕೂ ನಿಮ್ಮ ಭಯದ ಜತೆಗೆ ನಿಮ್ಮ ಮಗ್ಗಿ ಭಯವೂ ಏರಿದೆ...'

'...ಅವ್ನಿಗೆ ಯಾವ ಜ್ವರನೂ ಇಲ್ಲ... ಗಿರನೂ ಇಲ್ಲ. ಅಂವ ಊರಿಗೆ ಹೋಗುದೇ ಬೇಡ. ಜ್ವರ